ಉಪವಿಭಾಗದ ಸಹಾಯಕ ನಿಬಂಧಕರು ದಿನಾಂಕ: 1–4–91 ರಂದು ಆದೇಶಿಸಿರುತ್ತಾರೆ. ವಿಚಾರಣಾ ವರದಿಯು ಮುಖ್ಯವಾಗಿ, ಸಾಲ ವಸೂಲಾತಿಯಲ್ಲಿ ಮತ್ತು ಪಾವತಿಯಲ್ಲಿ ಆಗಿರುವ ಲೋಪದೋಷಗಳು, ಅವಶ್ಯ ಮಂಜೂರಾತಿಯಿಲ್ಲದೆ ಸಾಲ ವಿತರಣೆ ಮಾಡಿರುವುದು, ಸುಸ್ತಿ ಸಾಲದ ವಸೂಲಾತಿಗೆ ಯಾವುದೇ ಕ್ರಮವಿಡದೇ ಇರುವುದು ಹಾಗೂ ಬ್ಯಾಂಕಿನ ಕಟ್ಟಡ ನಿರ್ಮಾಣದಲ್ಲಿ ಮಾಡಿರುವ ಅವ್ಯವಹಾರಗಳ ಬಗ್ಗೆ ಇತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ.

ವಿಚಾರಣಾ ವರದಿಯಲ್ಲಿ ಬಂದಿರುವ ಅಂಶಗಳ ಮೇಲೆ ಈಗಾಗಲೇ ಸಾಲ ವಸೂಲಾತಿಗೆ, ಸುಸ್ತಿ ಸಾಲಗಳ ಮೇಲೆ ಕಾನೂನು ಕ್ರಮ, ಕೆಲವು ನಿರ್ದೇಶಕರುಗಳ ಮೇಲೆ ಅಧಿಭಾರ ಪ್ರಕರಣ ದಾಖಲಾತಿ ಕ್ರಮ ಮತ್ತು ಅಂದಿನ ವ್ಯವಸ್ಥಾಪಕರ ಮೇಲೆ ಶಿಸ್ತಿನ ಕ್ರಮವಾಗಿ ಆಂತರಿಕ ವಿಚಾರಣೆಯನ್ನು ಆದೇಶಿಸಲಾಗಿದೆ. ಬ್ಯಾಂಕ್‌ನ ಹೊಸ ಕಟ್ಟಡದ ವಿಚಾರದಲ್ಲಿ, ಕಟ್ಟಡವನ್ನು ಗುತ್ತಿಗೆದಾರರಿಂದ ವಶಕ್ಕೆ ಪಡೆಯಲು ಹಾಗೂ ಕಟ್ಟಡದ ಬೆಲೆಯನ್ನು ಮೌಲೀಕರಣ ಮಾಡಿಸಲು ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಹಾಸನ ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಕಟ್ಟಡ ಕಟ್ಟಲು ಗುತ್ತಿಗೆಗೆ ಪಡೆದ ಹಣ

(1992): ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):–

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಡೈರಕ್ಟರೊಬ್ಬರು ಬ್ಯಾಂಕಿನ ಕಟ್ಟಡವನ್ನು ಕಟ್ಟಲು ಗುತ್ತಿಗೆ ತೆಗೆದುಕೊಂಡು ಬಿಲ್ ಕೊಟ್ಟು ಚೆಕ್ ಪಡೆದಿರುವುದು ನಿಜವೇ;

ಆ. ಸಹಕಾರ ಸಂಘದ ಡೈರಕ್ಟರೊಬ್ಬರು ಅದೇ ಬ್ಯಾಂಕಿನ ಕಟ್ಟಡವನ್ನು ಕಟ್ಟಲು ಗುತ್ತಿಗೆ ತೆಗೆದುಕೊಳ್ಳುವುದು ಕಾನೂನು ಬಾಹಿರ ಕ್ರಮವಲ್ಲವೇ;

ಇ. ಈ ಕಾನೂನುಬಾಹಿರ ಕ್ರಮವು ಇಲಾಖೆಯ ಅಧಿಕಾರಿಗಳ ಗಮನಕ್ಕೆ ಯಾವ ತಾರೀಖಿನಲ್ಲಿ ಬಂದಿದೆ ? ಈ ವಿಚಾರವಾಗಿ ಸರ್ಕಾರದವರು ತೆಗದುಕೊಂಡ ಕ್ರಮವೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಕಟ್ಟಡದ ಗುತ್ತಿಗೆಯನ್ನು ಒಂದು ಸಂಸ್ಥೆಗೆ ವಹಿಸಲಾಗಿತ್ತು. ಆ ಸಂಸ್ಥೆಯಲ್ಲಿ ಬ್ಯಾಂಕಿನ ಒಬ್ಬ ನಿರ್ದೇಶಕರು ಪಾಲುದಾರರಾಗಿದ್ದರು. ಸಂಸ್ಥೆಯ ಹೆಸರಿನಲ್ಲಿ ಬಿಲ್ಲುಗಳನ್ನು ಪಾವತಿಸಲಾಗಿದೆ.

ಆ. ಹೌದು.

ಇ. ಗುತ್ತಿಗೆ ಪಡೆದ ಸಂಸ್ಥೆಯ ಒಬ್ಬ ಪಾಲುದಾರರು ಬ್ಯಾಂಕಿನ ನಿರ್ದೇಶಕರಾಗಿದ್ದಾರೆಂಬುದು ಇಲಾಖೆಯ ಅಧಿಕಾರಿಗಳ ಗಮನಕ್ಕೆ ದಿನಾಂಕ: 3–10–91ರಂದು ಬಂದಿರುತ್ತದೆ. ಈ ನಿರ್ದೇಶಕರನ್ನು ಕಾಯ್ದೆ ಕಲಂ 29 (ಸಿ) ಅನ್ವಯ ಅನರ್ಹಗೊಳಿಸಲಾಗಿದೆ. ಈ ಅನರ್ಹಗೊಳಿಸಿದ ಆದೇಶವನ್ನು ಮೇಲ್ಮನವಿ ಪ್ರಾಧಿಕಾರವು ತಳ್ಳಿಹಾಕಿತು. ಹೊಸದಾಗಿ ತಿಳುವಳಿಕೆಯನ್ನು ಜಾರಿ ಮಾಡಲಾಯಿತು. ಈ ಕ್ರಮದ ಮೇಲೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ಪಡೆದಿರುತ್ತಾರೆ.